# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-4123/2015/ಡಿಆರ್‌ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 20/01/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಎಂ.ಬಿ.ರವಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ಉಪ ವಿಭಾಗ, ದಾವಣಗೆರೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಡಿ.ವಿಜಯಕುಮಾರ್ ಬಿನ್ ದುರುಗಪ್ಪ, ನಂ.1332, 2ನೇ ಕ್ರಾಸ್, ಗಾಂಧಿನಗರ, ದಾವಣಗೆರೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಎಂ.ಬಿ.ರವಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ಉಪ ವಿಭಾಗ, ದಾವಣಗೆರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಅವರ ಸೇವೆಯ ಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಅಕ್ರಮ ಆಸ್ತಿಯನ್ನು ಸಂಪಾದಿಸಿರುತ್ತಾರೆ. ಸದರಿಯವರು ಸರ್ಕಾರಕ್ಕೆ ಪ್ರತಿ ವರ್ಷ ಸುಳ್ಳಿ ಆಸ್ತಿ ಮತ್ತು ದಾಯಿತ್ವ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಬೇನಾಮಿ ವ್ಯಕ್ತಿಗಳ ಹೆಸರಿನಲ್ಲಿ ಮತ್ತು ಅವರ ಕುಟುಂಬ ಸಂಬಂಧಿಗಳ ಹೆಸರಿನಲ್ಲಿ ಅಕ್ರಮ ಆಸ್ತಿಗಳನ್ನು ಹೊಂಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೂರ್ವ ವಲಯ, ದಾವಣಗೆರೆ, ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಇವರು ಪೊಲೀಸ್ ನಿರೀಕ್ಷಕರ ಮೂಲಕ ತನಿಖೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಕಂಡ ಅಭಿಪ್ರಾಯವನ್ನು ನೀಡಿರುತ್ತಾರೆ.

"ಅರ್ಜಿಯಲ್ಲಿ ಆರೋಪಿಸಿರುವಂತೆ ಎದುರುದಾರರು ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮ ಆಸ್ತಿ ಗಳಿಸಿರುತ್ತಾರೆ ಎಂಬುದನ್ನು ದೃಢಪಡಿಸುವ ಯಾವುದೇ ಸೂಕ್ತ ಸಾಕ್ಷ್ಯಾಧಾರಗಳು ವಿಚಾರಣಾ ಕಾಲದಲ್ಲಿ ಲಭ್ಯವಾಗಿರುವುದಿಲ್ಲ. ಶ್ರೀ.ಡಿ.ವಿಜಯ್‌ಕುಮಾರ್ ಇವರು ಸಲ್ಲಿಸಿರುವ ಅರ್ಜಿಯಲ್ಲಿನ ಆಪಾದನೆಗಳು ವಾಸ್ತವಾಂಶದಿಂದ ಕೂಡಿರುವುದಿಲ್ಲ" ಎಂದು ವರದಿಯಲ್ಲಿ ತಿಳಿಸಿರುತ್ತಾರೆ.

4) ತನಿಖಾಧಿಕಾರಿಗಳ ವರದಿಯ ಮೇಲೆ ಪ್ರತ್ಯುತ್ತರವನ್ನು ಸಲ್ಲಿಸುವಂತೆ ದೂರುದಾರರಿಗೆ ಆದೇಶಿಸಲಾಗಿತ್ತು. ದೂರುದಾರರು ನೋಟೀಸು ಜಾರಿಯಾಗಿದ್ದರೂ ಸಹ ಅವರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

5) ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ದಾವಣಗೆರೆ ನಗರ ಶಾಮನೂರು ಗ್ರಾಮದಲ್ಲಿ ಒಂದು ಖಾಲಿ ನಿವೇಶನವನ್ನು, ಎದುರುದಾರರ ಹೆಂಡತಿಯ ಹೆಸರಿನಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಕಡಬಗೆರೆ ಗ್ರಾಮದಲ್ಲಿ ಖಾಲಿ ನಿವೇಶನವನ್ನು ಮತ್ತು ದಾವಣಗೆರೆ ನಗರದ ವಿನೋಬಾನಗರದಲ್ಲಿ ತಂದೆ ಹೆಸರಿನಲ್ಲಿ ಮನೆಯನ್ನು ಹೊಂದಿರುವುದು ಕಂಡುಬರುತ್ತದೆ. ಅದೇರೀತಿ ಎದುರುದಾರರ ಹೆಂಡತಿ ಶ್ರೀಮತಿ.ಶೋಭಾ ರವರ ತಾಯಿ ಶ್ರೀಮತಿ.ಭಾಗ್ಯರತ್ನ ರವರ ಹೆಸರಿನಲ್ಲಿ ನೀರಾವರಿ ಜಮೀನು ಹಾಗೂ ಅಡಿಕೆ ತೋಟ ಇರುವುದನ್ನು ನಮೂದಿಸಿರುತ್ತಾರೆ. ಆದ್ದರಿಂದ, ಎದುರುದಾರರ ಹೆಸರಿನಲ್ಲಿ ಹಾಗೂ ಅವರ ಹೆಂಡತಿ ಹಾಗೂ ತಂದೆ ಹೆಸರಿನಲ್ಲಿರುವ ಜಮೀನುಗಳನ್ನು ಯಾವ ಆದಾಯದ ಮೂಲದಿಂದ ಖರೀದಿಸಲಾಗಿದೆ ಮತ್ತು ಅವುಗಳನ್ನು ಖರೀದಿಸಲು ಇಲಾಖಾ ಅನುಮತಿಯನ್ನು ಪಡೆಯಲಾಗಿದೆಯೇ ಎಂಬುದನ್ನು ಮತ್ತು ಖರೀದಿಸಿದ ವಿಚಾರವನ್ನು ಇಲಾಖೆಯ ಗಮನಕ್ಕೆ ತರಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು ಸೂಕ್ತವೆಂದು ಕಂಡುಬಂದಿದ್ದು, ಸದರಿ ಅಂಶಗಳ ಬಗ್ಗೆ ವಿವರಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು.

6) ಎದುರುದಾರರು ವಿವರಣೆಯನ್ನು ಸಲ್ಲಿಸಿದ್ದು, ವಿವರಣೆಯಲ್ಲಿ ದಾವಣಗೆರೆ ನಗರ ಶಾಮನೂರಿನಲ್ಲಿ ಖಾಲಿ ನಿವೇಶನವನ್ನು 2002 ರಲ್ಲಿ ಅವರ ಸಂಬಳದ ಉಳಿತಾಯದ ಮೊತ್ತದಲ್ಲಿ ಖರೀದಿಸಿರುತ್ತಾರೆ. ಎದುರುದಾರರ ಹೆಂಡತಿಯ ಹೆಸರಿನಲ್ಲಿ ಖಾಲಿ ನಿವೇಶನವನ್ನು 2006ನೇ ವರ್ಷದಲ್ಲಿ ದಾವಣಗೆರೆ ನಗರದ 10ನೇ ವಿಭಾಗ ಸೈಟ್ ನಂ.3223/41 ನ್ನು ಮಾರಿ ಬಂದ ಹಣದಲ್ಲಿ ಹಾಗೂ ಹೆಂಡತಿಯ ತಾಯಿಯವರಿಂದ ಹಣವನ್ನು ಕೊಡುಗೆಯಾಗಿ ಪಡೆದು ಮತ್ತು ಸಂಬಳದ ಉಳಿತಾಯದಲ್ಲಿ ಖರೀದಿಸಿರುತ್ತಾರೆಂದು ತಿಳಿಸಿರುತ್ತಾರೆ.

7) ತನ್ನ ಸಂಬಳದ ಉಳಿತಾಯದಲ್ಲಿ ನಿವೇಶನವನ್ನು ಖರೀದಿಸಿದ್ದಾಗಿ ಎದುರುದಾರರು ತಿಳಿಸಿದ್ದು, ಆದರೆ ಸಂಬಳದ ಉಳಿತಾಯದ ಹಣದಿಂದ ಖರೀದಿ ಮಾಡಲಾಗಿದೆಯೆನ್ನುವುದನ್ನು ತೋರಿಸಲು ಯಾವುದೇ ದಾಖಲಾತಿಗಳನ್ನು ಎದುರುದಾರರು ಹಾಜರು ಪಡಿಸಿರುವುದಿಲ್ಲ. ಸದರಿ ಸ್ವತ್ತಿನ ಮೌಲ್ಯ ರೂ.20 ಲಕ್ಷ ಎಂದು ತನಿಖಾಧಿಕಾರಿಯ ವರದಿಯಲ್ಲಿ ಕಂಡುಬರುತ್ತಿದ್ದು, ಸದರಿ ರೂ.20 ಲಕ್ಷವನ್ನು ತನ್ನ ಸಂಬಳದ ಉಳಿತಾಯದಿಂದ ಹೊಂದಿಸಿಕೊಂಡಿರುತ್ತಾರೆ ಎನ್ನುವುದನ್ನು ತೋರಿಸಲು ಎದುರುದಾರರು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ದಾವಣಗೆರೆಯ ವಿನೋಬಾನಗರದಲ್ಲಿ ತಂದೆಯ ಹೆಸರಿನಲ್ಲಿರುವ ಆರ್.ಸಿ.ಸಿ. ಮನೆ ಮತ್ತು ನಿವೇಶನವನ್ನು ಯಾವಾಗ ಖರೀದಿಸಲಾಗಿದೆ ಮತ್ತು ಮನೆಯನ್ನು ಯಾವಾಗ ಕಟ್ಟಲಾಗಿದೆಯೆನ್ನುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಅದೇರೀತಿ ಎದುರುದಾರರ ಹೆಂಡತಿಯ ತಾಯಿಯವರ ಹೆಸರಿನಲ್ಲಿರುವ ಸ್ವತ್ತುಗಳನ್ನು ಯಾವಾಗ ಖರೀದಿಸಲಾಗಿದೆಯೆನ್ನುವ ಬಗ್ಗೆ ಎದುರುದಾರರು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಆದರೆ ಎದುರುದಾರರ

ಹೆಂಡತಿಯ ತಾಯಿಯ ಹೆಸರಿನಲ್ಲಿರುವ ಪಹಣಿ ಪತ್ರಿಕೆಗಳಲ್ಲಿ ಹೆಚ್ಚಿನ ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಿರುವ ಬಗ್ಗೆ ನಮೂದುಗಳು ಕಂಡುಬರುತ್ತಿವೆ.

8) ಎದುರುದಾರರು ತನ್ನ ಹೆಸರಿನಲ್ಲಿ ಮತ್ತು ತನ್ನ ಪತ್ನಿಯ ಹೆಸರಿನಲ್ಲಿ ಖರೀದಿ ಮಾಡಿರುವ ಸ್ವತ್ತುಗಳನ್ನು ಖರೀದಿಸಲು ಆದಾಯದ ಮೂಲದ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸದಿರುವ ಕಾರಣ ಮತ್ತು ಎದುರುದಾರರ ತಂದೆಯ ಹೆಸರಿನಲ್ಲಿರುವ ಸ್ವತ್ತುಗಳ ದಾಖಲಾತಿಗಳನ್ನು ಸಲ್ಲಿಸದಿರುವ ಕಾರಣ ಸದರಿಯವರ ವಿರುದ್ಧ ಪ್ರತೀಕೂಲ ನಿರ್ಣಯವನ್ನು ಮಾಡಬೇಕಾಗುತ್ತದೆ. ಸದರಿ ಸ್ವತ್ತುಗಳನ್ನು ಖರೀದಿಸಿದ ಬಗ್ಗೆ ಮತ್ತು ಅದನ್ನು ಖರೀದಿಸಲು ಹೊಂದಿಸಿರುವ ಹಣದ ಬಗ್ಗೆ ಯಾವುದೇ ದಾಖಲಾತಿಗಳನ್ನು ಎದುರುದಾರರು ನೀಡದೇ ಇರುವುದರಿಂದ ಸದರಿಯವರು ಆದಾಯಕ್ಕಿಂತ ಹೆಚ್ಚು ಆಸ್ತಿಗಳನ್ನು ಹೊಂದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

9) ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಸ್ವತ್ತನ್ನು ಖರೀದಿಸಲು ಮತ್ತು ಮನೆ ಕಟ್ಟಲು ಇಲಾಖೆಯಿಂದ ಅನುಮತಿ ಪಡೆಯದೆ ಕೆ.ಸಿ.ಎಸ್.ಆರ್.ಸೇವಾ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಮೇಲ್ನೋಕ್ಕೆ ಕಂಡುಬರುತ್ತದೆ. ಮೇಲಿನ ಅಂಶಗಳನ್ನು ಗಮನಿಸಿದಾಗ, ಎದುರುದಾರರು ತನ್ನ ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿಗಳನ್ನು ಹೊಂದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

10) ಮೇಲಿನ ಎಲ್ಲಾ ಅಂಶಗಳನ್ನು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರು ಅಧಿಕಾರ ದುರುಪಯೋಗ ಪಡಿಸಿಕೊಂಡಿಸಿಕೊಂಡು, ಕೆ.ಸಿ.ಎಸ್.ಆರ್.ಸೇವಾ ನಿಯಮಗಳನ್ನು ಉಲ್ಲಂಘನೆ ಮಾಡಿ ಸ್ವತ್ತುಗಳನ್ನು ಖರೀದಿಸುವಾಗ ಇಲಾಖೆಯಿಂದ ಅನುಮತಿ ಪಡೆಯದಿರುವುದರಿಂದ ಅವರು ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

11) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎದುರುದಾರರು ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮ ಆಸ್ತಿಯನ್ನು ಹೊಂದಿರುವ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲು **ಭ್ರಷ್ಟಾಚಾರ ನಿಗ್ರಹ ದಳ,** ಇವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

20/1/18

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**

20/01